# ಕರ್ನಾಟಕ ಕೆಲವು ಸರಕುಗಳ ಪ್ರವೇಶದ ಮೇಲೆ ವಿಶೇಷ ತೆರಿಗೆ ಅಧಿನಿಯಮ, 2004

## ಪ್ರಕರಣಗಳ ಪಟ್ಟಿ

**ಪ್ರಕರಣಗಳು**


### ಅಧ್ಯಾಯ - I

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ - II

**ತೆರಿಗೆ ವಿಧಿಸುವುದು**

3. ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆ
4. ತೆರಿಗೆ ಬಾಧ್ಯತೆಯನ್ನು ಕಡಿಮೆ ಮಾಡುವುದು
5. ತೆರಿಗೆ ವಿನಾಯಿತಿ ನೀಡಲು ಅಧಿಕಾರ

### ಅಧ್ಯಾಯ-III

**ತೆರಿಗೆ ಪ್ರಾಧಿಕಾರಗಳು, ರಿಟರ್ನ್‌ಗಳು, ತೆರಿಗೆ ನಿರ್ಧರಣೆಗಳು, ಸಂದಾಯಗಳು, ವಸೂಲಿ ಇತ್ಯಾದಿ.**

6. ತೆರಿಗೆ ಪ್ರಾಧಿಕಾರಗಳು, ರಿಟರ್ನ್‌ಗಳು, ತೆರಿಗೆ ನಿರ್ಧರಣೆಗಳು, ಸಂದಾಯಗಳು, ವಸೂಲಿ, ಇತ್ಯಾದಿ
7. ರುಜುವಾತಿನ ಭಾರ
8. ಸದ್ಭಾವನೆಯ ಕ್ರಮಕ್ಕೆ ರಕ್ಷಣೆ
9. ಈ ಅಧಿನಿಯಮದಲ್ಲಿ ಉಪಬಂಧಿಸಲಾದುದರ ಹೊರತಾಗಿ ನ್ಯಾಯಾಲಯಗಳು ತೆರಿಗೆ ನಿರ್ಧರಣೆಯನ್ನು ತಳ್ಳಿಹಾಕತಕ್ಕದ್ದಲ್ಲ ಅಥವಾ ಮಾರ್ಪಾಡು ಮಾಡತಕ್ಕದ್ದಲ್ಲ

### ಅಧ್ಯಾಯ - IV

**ಅಪರಾಧಗಳು ಹಾಗೂ ಜುಲ್ಮಾನೆಗಳು**

10. ಅಪರಾಧಗಳು ಹಾಗೂ ಜುಲ್ಮಾನೆಗಳು
11. ಕಂಪೆನಿಗಳಿಂದ ಅಪರಾಧಗಳು
12. ಅಪರಾಧಗಳ ಸಂಜ್ಞಾನ
13. ಅಪರಾಧಗಳ ರಾಜಿ

### ಅಧ್ಯಾಯ - V

**ಸಂಕೀರ್ಣ**

14. ತೊಂದರೆಗಳನ್ನು ನಿವಾರಿಸಲು ಅಧಿಕಾರ
15. ನಿಯಮಗಳನ್ನು ರಚಿಸಲು ಅಧಿಕಾರ


* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಕ್ಟ್ರಾಯ್ ರದ್ದತಿಯಿಂದ ಸ್ಥಳೀಯ ಸಂಸ್ಥೆಗಳಿಗೆ ಉಂಟಾದ ಆದಾಯದ ನಷ್ಟವನ್ನು ತುಂಬಿಕೊಡುವುದಕ್ಕಾಗಿ ಸ್ಥಳೀಯ ಪ್ರದೇಶಗಳೊಳಗೆ ಸರಕುಗಳ ಪ್ರವೇಶದ ಮೇಲೆ ತೆರಿಗೆ ವಿಧಿಸುವುದಕ್ಕಾಗಿ ಅವಕಾಶ ಕಲ್ಪಿಸಿ ರಾಜ್ಯಸರ್ಕಾರದ ರಾಜಸ್ವವನ್ನು ಹೆಚ್ಚಿಸುವುದಕ್ಕಾಗಿ, ಕರ್ನಾಟಕ ಪ್ರವೇಶ ತೆರಿಗೆ ಅಧಿನಿಯಮ, 1979ನ್ನು (1979ರ ಕರ್ನಾಟಕ ಅಧಿನಿಯಮ, 27) ಅಧಿನಿಯಮಿಸಲಾಯಿತು. ಸರಕುಗಳ ಪ್ರವೇಶಕ್ಕೆ ಕಾರಣರಾಗುವ ಎಲ್ಲ ವ್ಯಕ್ತಿಗಳಿಗೂ ಆಕ್ಟ್ರಾಯ್ ಅನ್ವಯವಾಗುತ್ತಿದ್ದರೂ ಅಂಥ ತೆರಿಗೆಯನ್ನು ಮುಖ್ಯವಾಗಿ ತಮ್ಮ ವ್ಯವಹಾರ ಕ್ರಮದಲ್ಲಿ ಸರಕುಗಳ

ಪ್ರವೇಶಕ್ಕೆ ಕಾರಣರಾದ ವ್ಯಾಪಾರಿಗಳ ಮೇಲೆ ವಿಧಿಸಲಾಗುತ್ತಿದೆ ಮತ್ತು ಸ್ಥಳೀಯ ಪ್ರದೇಶಗಳೊಳಗೆ ವ್ಯಾಪರಿಗಳ ಹೊರತಾಗಿ ಸರಕುಗಳ ಪ್ರವೇಶಕ್ಕೆ ಕಾರಣರಾಗುವ ಇತರ ವ್ಯಕ್ತಿಗಳ ಮೇಲೆ ತೆರಿಗೆ ವಿಧಿಸುವುದಕ್ಕಾಗಿ ಉಪಬಂಧಕಲ್ಪಿಸಿರಲಿಲ್ಲ.

ಆದ್ದರಿಂದ ಯಾವ ವ್ಯಕ್ತಿಯೇ ಆದರೂ ರಾಜ್ಯದ ಹೊರಗಿನಿಂದ ತರುವ ಇತರ ಸರಕುಗಳ ಪ್ರವೇಶದ ಮೇಲೆ ಸಹ ವಿಶೇಷ ತೆರಿಗೆಯನ್ನು ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಅದ್ದರಿಂದ ಈ ವಿಧೇಯಕ.

(2004ರ ವಿಧಾನಸಭೆಯ ವಿಧೇಯಕ ಸಂಖ್ಯೆ 21)

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 52ನೇ ನಮೂದು)

## 2004ರ ಕರ್ನಾಟಕ ಅಧಿನಿಯಮ ಸಂಖ್ಯೆ: 29

(2004ರ ಆಗಸ್ಟ್ 11ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಕೆಲವು ಸರಕುಗಳ ಪ್ರವೇಶದ ಮೇಲೆ ವಿಶೇಷ ತೆರಿಗೆ ಅಧಿನಿಯಮ, 2004

(2004ರ ಆಗಸ್ಟ್ 9ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

ಸ್ಥಳೀಯ ಪ್ರದೇಶಗಳೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಕೆಲವು ಸರಕುಗಳ ಪ್ರವೇಶದ ಮೇಲೆ ವಿಶೇಷ ತೆರಿಗೆ ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಸ್ಥಳೀಯ ಪ್ರದೇಶಗಳೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಕೆಲವು ಸರಕುಗಳ ಪ್ರವೇಶದ ಮೇಲೆ ರಾಜ್ಯ ಸರ್ಕಾರವು ವಿಶೇಷ ತೆರಿಗೆ ವಿಧಿಸಲು ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ,

ಭಾರತ ಗಣರಾಜ್ಯದ ಐವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಇದು ಈ ಮುಂದಿನಂತೆ ಅಧಿನಿಯಮಿತವಾಗಲಿ.-

## ಅಧ್ಯಾಯ - I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಕೆಲವು ಸರಕುಗಳ ಪ್ರವೇಶದ ಮೇಲೆ ವಿಶೇಷ ತೆರಿಗೆ ಅಧಿನಿಯಮ, 2004 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆಬೇರೆ ಉಪಬಂಧಗಳಿಗೆ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಅಧಿನಿಯಮದ ಎಲ್ಲಾ ಉಪಬಂಧಗಳು ಅಧಿಸೂಚನೆ ಮೂಲಕ ದಿನಾಂಕ: 20.09.2004ರಿಂದ ಜಾರಿಗೆ ಬಂದಿವೆ

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ತೆರಿಗೆದಾರ" ಎಂದರೆ ತೆರಿಗೆ ಸಂದಾಯ ಮಾಡಬೇಕಾಗಿರುವ ಒಬ್ಬ ವ್ಯಕ್ತಿ;

(ಬಿ) "ತೆರಿಗೆ ನಿರ್ಧರಣಾ ಪ್ರಾಧಿಕಾರ" ಎಂದರೆ,-

(i) ವ್ಯಾಪಾರಿಯಾಗಿರುವ ಒಬ್ಬ ಆಮದುದಾರನ ಸಂಬಂಧದಲ್ಲಿ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಡಿಯಲ್ಲಿ ನಿರ್ದಿಷ್ಟ ಪಡಿಸಿರುವಂಥ ಪ್ರಾಧಿಕಾರ;

(ii) ವ್ಯಾಪಾರಿಯಲ್ಲದಿರುವಂಥ ಒಬ್ಬ ಆಮದುದಾರನ ಸಂಬಂಧದಲ್ಲಿ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ಯಾವ ಶೋಧನಾಠಾಣೆ ಮೂಲಕ ಅಧಿಸೂಚಿತ ಸರಕುಗಳನ್ನು ರಾಜ್ಯದೊಳಗೆ ತರಲಾಗುವುದೋ ಆ ಶೋಧನಾಠಾಣೆಯ ಪ್ರಭಾರದಲ್ಲಿರುವ ಅಧಿಕಾರಿ ಅಥವಾ ಅಧಿಸೂಚಿತ ಸರಕುಗಳನ್ನು ಸಾಗಣೆ ಮಾಡುವಾಗ ಸರಕು ವಾಹನಗಳನ್ನು ಶೋಧನಾಠಾಣೆಯಲ್ಲದ ಇತರ ಸ್ಥಳಗಳಲ್ಲಿ ತಡೆದು ನಿಲ್ಲಿಸಿದರೆ ಹಾಗೆ ತಡೆದು ನಿಲ್ಲಿಸಿದ ಅಧಿಕಾರಿ ಅಥವಾ ಅಂಥ ಆಮದುದಾರನು ಸಾಮಾನ್ಯವಾಗಿ ವಾಸಿಸುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ನೇಮಿಸಲಾದ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು;

(ಸಿ) "ವ್ಯಾಪಾರಿ" ಎಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ಪರಿಭಾಷಿಸಲಾದಂತೆ ಒಬ್ಬ ವ್ಯಾಪಾರಿ;

(ಡಿ) "ಸ್ಥಳೀಯ ಪ್ರದೇಶಗಳೊಳಗೆ ಸರಕುಗಳ ಪ್ರವೇಶ" ಎಂದರೆ, ಅದರ ಎಲ್ಲ ವ್ಯಾಕರಣ ವ್ಯತ್ಯಾಸಗಳು ಹಾಗೂ ತತ್ಸಂಬಂಧ ಪ್ರಯೋಗಗಳೊಂದಿಗೆ, ರಾಜ್ಯದ ಹೊರಗಿನ ಯಾವುದೇ ಪ್ರದೇಶದಿಂದ ರಾಜ್ಯದ ಯಾವುದೇ ಸ್ಥಳೀಯ ಪ್ರದೇಶದೊಳಕ್ಕೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಅಧಿಸೂಚಿತ ಸರಕುಗಳ ಪ್ರವೇಶ;

(ಇ) "ಸರಕು ವಾಹನ" ಎಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ 2ನೇ ಪ್ರಕರಣದ (1)ನೇ ಉಪಪ್ರಕರಣದ (ಎಂ-1)ನೇ ಖಂಡದಲ್ಲಿ ಪರಿಭಾಷಿಸಲಾದಂಥ ಒಂದು ಸರಕು ವಾಹನ.

(ಎಫ್) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(ಜಿ) "ಆಮದುದಾರ" ಎಂದರೆ, ಯಾವುದೇ ಅಧಿಸೂಚಿತ ಸರಕುಗಳನ್ನು ಒಂದು ಸ್ಥಳೀಯ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ರಾಜ್ಯದ ಹೊರಗಿನ ಯಾವುದೇ ಸ್ಥಳದಿಂದ ತನಗೋಸ್ಕರ ಅಥವಾ ಒಬ್ಬ ಮೂಲಕರ್ತನಿಗೋಸ್ಕರ ಅಥವಾ ಬೇರೊಬ್ಬ ವ್ಯಕ್ತಿಗೋಸ್ಕರ ತರುವ ಅಥವಾ ಅವುಗಳನ್ನು ತರುವಂತೆ ಮಾಡುವ ಅಥವಾ ಅಧಿಸೂಚಿತ ಸರಕುಗಳು ರಾಜ್ಯದ ಸ್ಥಳೀಯ ಪ್ರದೇಶದೊಳಗೆ ರಾಜ್ಯದ ಹೊರಗಿನ ಯಾವುದೇ ಸ್ಥಳದಿಂದ ಪ್ರವೇಶಿಸುವಾಗ ಅವುಗಳ ಒಡೆತನವನ್ನು ಹೊಂದಿರುವ ಒಬ್ಬ ವ್ಯಕ್ತಿ;

(ಎಚ್) "ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ" ಎಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 25);

(ಐ) "ಸ್ಥಳೀಯ ಪ್ರದೇಶ" ಎಂದರೆ, ಒಂದು ಸ್ಥಳೀಯ ಪ್ರಾಧಿಕಾರದ ಮಿತಿಗಳೊಳಗಿನ ಒಂದು ಪ್ರದೇಶ;

(ಜೆ) "ಅಧಿಸೂಚಿತ ಸರಕುಗಳು" ಎಂದರೆ, ಈ ಅಧಿನಿಯಮದ ಉದ್ದೇಶಕ್ಕಾಗಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದ ಸರಕುಗಳು;

(ಕೆ) "ವ್ಯಕ್ತಿ" ಎಂಬುದರಲ್ಲಿ ಯಾವುದೇ ಕಂಪೆನಿ ಅಥವಾ ನಿಗಮಿತವಾದ ಇಲ್ಲವೇ ನಿಗಮಿತವಾಗಿರದ ವ್ಯಕ್ತಿಗಳ ಒಂದು ಸಂಸ್ಥೆ ಅಥವಾ ನಿಕಾಯ, ಒಂದು ಫರ್ಮು, ಒಂದು ಸ್ಥಳೀಯ ಪ್ರಾಧಿಕಾರ, ಒಂದು ಹಿಂದೂ ಅವಿಭಕ್ತ ಕುಟುಂಬ, ಒಂದು ಸಂಘ, ಒಂದು ಕ್ಲಬ್ ಅಥವಾ ಒಬ್ಬ ಮನುಷ್ಯ ವ್ಯಕ್ತಿ ಅಥವಾ ಬೇರೆ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ಸರ್ಕಾರ ಸೇರುತ್ತವೆ;

(ಎಲ್) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ;

(ಎಂ) "ತೆರಿಗೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ವಿಧಿಸಬೇಕಾದ ತೆರಿಗೆ;

(ಎನ್) "ಅಧಿಸೂಚಿತ ಸರಕುಗಳ ಮೌಲ್ಯ" ಎಂದರೆ, ಮೂಲ ದರಪಟ್ಟಿಯಿಂದ ಖಚಿತವಾಗಿ ತಿಳಿದಂತೆ ಅಧಿಸೂಚಿತ ಸರಕುಗಳ ಖರೀದಿ ಮೌಲ್ಯ ಮತ್ತು ಇದರಲ್ಲಿ ಅಂಥ ಸರಕುಗಳಿಗೆ ಜೋಡಿಸಲಾದ ಜೊತೆ ಸಾಧನಗಳ ಮೌಲ್ಯ, ವಿಮೆ, ಅಬ್ಕಾರಿ ಸುಂಕಗಳು, ಪ್ರತಿಸುಂಕಗಳು ಅಥವಾ ಅಂಥ ಸರಕುಗಳ ಖರೀದಿಯ ಮೇಲೆ ಪ್ರಾಸಂಗಿಕವಾಗಿ ವಿಧಿಸಲಾಗುವ ಇತರ ಯಾವುವೇ ಸುಂಕಗಳು, ಮಾರಾಟ ತೆರಿಗೆ, ಸಾರಿಗೆ ಶುಲ್ಕ, ಸಾಗಣೆ ಶುಲ್ಕ ಹಾಗೂ ಇತರ ಎಲ್ಲ ಶುಲ್ಕಗಳು:

ಪರಂತು, ಮೂಲದರಪಟ್ಟಿ ಸಿಗದಿರುವ ಅಥವಾ ಅದನ್ನು ಸಲ್ಲಿಸದಿರುವ ಕಾರಣಕ್ಕಾಗಿ ಅಥವಾ ಸಲ್ಲಿಸಲಾದ ದರಪಟ್ಟಿ ಸುಳ್ಳು ಎಂದು ರುಜುವಾತಾದಾಗ ಅಥವಾ ಯಾವುವೇ ಅಧಿಸೂಚಿತ ಸರಕುಗಳನ್ನು ಖರೀದಿಯಿಂದಲ್ಲದೇ ಬೇರೆ ರೀತಿಯಲ್ಲಿ ದೊರಕಿಸಿಕೊಂಡಿದ್ದಾಗ ಅಥವಾ ಪಡೆದಿದ್ದಾಗ, ಯಾವುವೇ ಅಧಿಸೂಚಿತ ಸರಕುಗಳ ಖರೀದಿ ಮೌಲ್ಯವನ್ನು ಖಚಿತವಾಗಿ ತಿಳಿಯಲಾಗದಿದ್ದರೆ, ಆಗ ಅದೇ ಮಾದರಿ ಅಥವಾ ಗುಣಮಟ್ಟದ ಯಾವುವೇ ಸರಕುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಯಾವ ಮೌಲ್ಯ ಅಥವಾ ಬೆಲೆಗೆ ಮಾರಲಾಗುತ್ತದೆಯೋ ಅಥವಾ ಮಾರಲು ಸಾಧ್ಯವಾಗುತ್ತದೆಯೋ ಅದೇ ಮೌಲ್ಯ ಅಥವಾ ಬೆಲೆಯು ಅದರ ಖರೀದಿ ಮೌಲ್ಯವಾಗಿರತಕ್ಕದ್ದು.

(2) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 ರಲ್ಲಿ (1957ರ ಕರ್ನಾಟಕ ಅಧಿನಿಯಮ 25) ಅವುಗಳಿಗೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ - II

## ತೆರಿಗೆ ವಿಧಿಸುವುದು

**3. ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆ.-** (1) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಅಧಿಸೂಚಿತ ಸರಕುಗಳ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಯಾವುದೇ ಸ್ಥಳೀಯ ಪ್ರದೇಶದೊಳಗೆ ಪ್ರವೇಶಿಸುವುದರ ಮೇಲೆ ತೆರಿಗೆಯನ್ನು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ಅಂಥ ಸರಕುಗಳ ವಿಷಯದಲ್ಲಿ ನಿರ್ದಿಷ್ಟಪಡಿಸಲಾದ ದರದಲ್ಲಿ ಸದರಿ ಅಧಿಸೂಚಿತ ಸರಕುಗಳ ಮೌಲ್ಯದ ಮೇಲೆ ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(2) ಆಮದುದಾರನು ಈ ಅಧಿನಿಯಮದ ಉಪಬಂಧಗಳಿಗನುಸಾರ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗನುಸಾರ ತೆರಿಗೆಯನ್ನು ಸಂದಾಯಮಾಡತಕ್ಕದ್ದು.

**4. ತೆರಿಗೆ ಬಾಧ್ಯತೆಯನ್ನು ಕಡಿಮೆ ಮಾಡುವುದು.-** (1) ಈ ಅಧಿನಿಯಮದ ಅಡಿಯಲ್ಲಿ ಯಾವುವೇ ಅಧಿಸೂಚಿತ ಸರಕುಗಳ ಮೇಲೆ ತೆರಿಗೆ ಸಂದಾಯಕ್ಕೆ ಬದ್ಧನಾದ ಒಬ್ಬ ಆಮದುದಾರನು ಅಂಥ ಅಧಿಸೂಚಿತ ಸರಕುಗಳನ್ನು ಮಾರಾಟ ಮಾಡುವ ಕಾರಣದಿಂದ ಅಧಿಸೂಚಿತ ಸರಕುಗಳ ವ್ಯಾಪಾರಿಯಾಗಿ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ತೆರಿಗೆ ಸಂದಾಯಕ್ಕೆ ಬದ್ಧನಾದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿನ ಅವನ ಬಾಧ್ಯತೆಯನ್ನು ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯಷ್ಟಕ್ಕೆ ಕಡಿಮೆಮಾಡತಕ್ಕದ್ದು ಅಥವಾ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಿದ ಮೊಬಲಗಿಗಿಂತ ಹೆಚ್ಚಿಗೆಯಾಗಿದ್ದಲ್ಲಿ, ಹಾಗೆ ಹೆಚ್ಚಿಗೆ ಸಂದಾಯ ಮಾಡಿದ ತೆರಿಗೆಯನ್ನು ನಿಯಮಿಸಬಹುದಾದಂತೆ ಮರುಸಂದಾಯ ಮಾಡತಕ್ಕದ್ದು.

(2) ಅಧಿಸೂಚಿತ ಸರಕುಗಳ ವ್ಯಾಪಾರಿಯಲ್ಲದ ಒಬ್ಬ ಆಮದುದಾರನು ತನ್ನ ಉಪಯೋಗ ಅಥವಾ ಬಳಕೆಗಾಗಿ ಯಾವುದೇ ಕೇಂದ್ರಾಡಳಿತ ಪ್ರದೇಶದಿಂದ ಅಥವಾ ಇತರ ಯಾವುದೇ ರಾಜ್ಯದಿಂದ ಅಧಿಸೂಚಿತ ಸರಕುಗಳ ಪ್ರವೇಶವನ್ನು ಮಾಡಿಸಿದ್ದರೆ ಈ ಅಧಿನಿಯಮದ ಅಡಿಯಲ್ಲಿನ ಅವನ ಬಾಧ್ಯತೆಯನ್ನು, ನಿಯಮಿಸಬಹುದಾದ ಅಂಥ ಷರತ್ತುಗಳಿಗೊಳಪಟ್ಟು, ಆ ಕೇಂದ್ರಾಡಳಿತ ಪ್ರದೇಶ ಅಥವಾ ರಾಜ್ಯದಲ್ಲಿ ಜಾರಿಯಲ್ಲಿರುವ ಸಾಮಾನ್ಯ ಮಾರಾಟ ತೆರಿಗೆಗೆ ಸಂಬಂಧಿಸಿದ ಕಾನೂನಿನ ಅಡಿಯಲ್ಲಿ ಅಥವಾ ಕೇಂದ್ರ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆ ಮೊತ್ತ ಯಾವುದಾದರೂ ಇದ್ದರೆ, ಆ ಮೊತ್ತದಷ್ಟಕ್ಕೆ ಕಡಿಮೆಮಾಡತಕ್ಕದ್ದು.

**5. ತೆರಿಗೆ ವಿನಾಯಿತಿ ನೀಡಲು ಅಧಿಕಾರ.-** (1) ರಾಜ್ಯ ಸರ್ಕಾರವು, ನಿರ್ದಿಷ್ಟಪಡಿಸಲಾದ ಯಾವುದೇ ಆಮದುದಾರ ವರ್ಗವನ್ನು, ಅಥವಾ ಯಾವುದೇ ವರ್ಗದ ಅಧಿಸೂಚಿತ ಸರಕುಗಳನ್ನು, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯಿಂದ ವಿನಾಯಿತಿಗೊಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವಾಗಿದ್ದರೆ, ಅಧಿಸೂಚನೆಯ ಮೂಲಕ ಹಾಗೆ ಮಾಡಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ಯಾವುದೇ ವಿನಾಯಿತಿಯು, ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ನಿಬಂಧನೆಗಳು ಹಾಗೂ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, (1)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯನ್ನು ರದ್ದುಪಡಿಸಬಹುದು ಅಥವಾ ಬದಲಾಯಿಸಬಹುದು.

## ಅಧ್ಯಾಯ-III

## ತೆರಿಗೆ ಪ್ರಾಧಿಕಾರಗಳು, ರಿಟರ್ನ್‌ಗಳು, ತೆರಿಗೆ ನಿರ್ಧರಣೆಗಳು, ಸಂದಾಯಗಳು, ವಸೂಲಿ ಇತ್ಯಾದಿ.

**6. ತೆರಿಗೆ ಪ್ರಾಧಿಕಾರಗಳು, ರಿಟರ್ನ್‌ಗಳು, ತೆರಿಗೆ ನಿರ್ಧರಣೆಗಳು, ಸಂದಾಯಗಳು, ವಸೂಲಿ, ಇತ್ಯಾದಿ-** (1) ಈ ಅಧಿನಿಯಮದ ಇತರ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೊಳಪಟ್ಟು ತೆರಿಗೆ ನಿರ್ಧರಣೆ ಮಾಡಲು, ಪುನರ್‌ನಿರ್ಧರಣೆ ಮಾಡಲು, ಸಂಗ್ರಹಣ ಮಾಡಲು ಮತ್ತು ಒಬ್ಬ ವ್ಯಾಪಾರಿಯು ಸಂದಾಯಮಾಡಬೇಕಾದ ಯಾವುದೇ ಬಡ್ಡಿ

ಅಥವಾ ದಂಡವು ಒಳಗೊಂಡಂತೆ ತೆರಿಗೆ ಸಂದಾಯವನ್ನು ಒತ್ತಾಯಪಡಿಸಲು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ತತ್ಕಾಲದಲ್ಲಿ ಅಧಿಕಾರ ಪಡೆದ ಪ್ರಾಧಿಕಾರಿಗಳು ಈ ಅಧಿನಿಯಮದ ಅಡಿಯಲ್ಲಿ ಒಬ್ಬ ಆಮದುದಾರನು ಸಂದಾಯ ಮಾಡಬೇಕಾದ ತೆರಿಗೆ ಅಥವಾ ಬಡ್ಡಿ ಅಥವಾ ದಂಡವು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ಸಂದಾಯವಾಗತಕ್ಕ ಒಂದು ತೆರಿಗೆ ಅಥವಾ ಬಡ್ಡಿ ಅಥವಾ ದಂಡವಾಗಿದ್ದರೆ ಹೇಗೋ ಹಾಗೆ- ತೆರಿಗೆ ನಿರ್ಧರಣೆ ಮಾಡತಕ್ಕದ್ದು, ಪುನರ್ ನಿರ್ಧರಣೆ ಮಾಡತಕ್ಕದ್ದು, ಸಂಗ್ರಹಣ ಮಾಡತಕ್ಕದ್ದು ಹಾಗೂ ತೆರಿಗೆ ಸಂದಾಯವನ್ನು ಒತ್ತಾಯಪಡಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ಅವರು ಹೊಂದಿರುವ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ರಿಟರ್ನ್‌ಗಳು, ತಾತ್ಕಾಲಿಕ ತೆರಿಗೆ ನಿರ್ಧರಣೆ, ಮುಂಗಡ ತೆರಿಗೆ ಸಂದಾಯ, ವ್ಯವಹಾರ ನಡೆಸುವ ಒಬ್ಬ ವ್ಯಕ್ತಿಯ ತೆರಿಗೆ ಸಂದಾಯ ಮಾಡುವ ಹೊಣೆಗಾರಿಕೆಯನ್ನು ಅಂಥ ಯಾವುದೇ ವ್ಯವಹಾರದ ವರ್ಗಾವಣೆಯ ಮೇಲೆ ಅಥವಾ ಉತ್ತರಾಧಿಕಾರಿಗೆ ವಿಧಿಸುವುದು, ಯಾವುದೇ ಒಂದು ಫರ್ಮಿನ ವಿಘಟನೆಯ ಅಥವಾ ಒಂದು ಅವಿಭಕ್ತ ಕುಟುಂಬದ ವಿಭಜನೆಯ ಸಂದರ್ಭದಲ್ಲಿ ಅಂಥ ಫರ್ಮು ಅಥವಾ ಅಂಥ ಕುಟುಂಬಕ್ಕೆ ಸಂಬಂಧಿಸಿದಂತೆ ತೆರಿಗೆ ಸಂದಾಯ ಮಾಡುವ ಹೊಣೆಯ ವರ್ಗಾವಣೆ, ಮೂರನೇ ಪಕ್ಷಕಾರರಿಂದ ತೆರಿಗೆ ವಸೂಲಾತಿ, ಅಪೀಲುಗಳು, ಪುನರ್ ಪರಿಶೀಲನೆಗಳು, ಪರಿಷ್ಕರಣೆಗಳು, ಉಲ್ಲೇಖಗಳು, ರಿಯಾಯಿತಿಗಳು, ದಂಡನೆಗಳು, ಬಡ್ಡಿವಿಧಿಸುವುದು ಅಥವಾ ಸಂದಾಯ, ಸಾಗಾಣೆದಾರರ ಆವರಣಗಳ, ಸರಕುವಾಹನಗಳ, ವ್ಯವಹಾರದ ಆವರಣಗಳ ತಪಾಸಣೆ, ನಿವಾಸ ಕಟ್ಟಡಗಳ ಶೋಧ, ಲೆಕ್ಕ ಇಟ್ಟಿರದ ಅನುಸೂಚಿತ ಸರಕುಗಳ ಸ್ವಾಧೀನತೆ ಮತ್ತು ಮುಟ್ಟುಗೋಲು, ದಸ್ತಾವೇಜುಗಳ ಸ್ವಾಧೀನತೆ, ಅಪರಾಧಗಳು ಮತ್ತು ಅಪರಾಧಗಳ ರಾಜಿ (10 ಮತ್ತು 11ನೇ ಪ್ರಕರಣಗಳಲ್ಲಿ ಉಪಬಂಧಿಸಲಾದ ವಿಷಯಗಳಿಗೆ ಸಂಬಂಧಪಟ್ಟ ಉಪಬಂಧಗಳನ್ನು ಹೊರತು ಪಡಿಸಿ) ಮತ್ತು ಆಮದುದಾರನು ಒದಗಿಸಿದ ದಸ್ತಾವೇಜುಗಳನ್ನು ರಹಸ್ಯವೆಂದು ಪರಿಗಣಿಸುವುದು-ಇವುಗಳಿಗೆ ಸಂಬಂಧಿಸಿದ ಉಪಬಂಧಗಳು ಒಳಗೊಂಡಂತೆ, ಆ ಅಧಿನಿಯಮದ ಎಲ್ಲ ಉಪಬಂಧಗಳು ತದನುಸಾರವಾಗಿ ಅನ್ವಯವಾಗುತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ವ್ಯಾಪಾರಿಯಲ್ಲದ ಒಬ್ಬ ಆಮದುದಾರನ ಸಂಬಂಧದಲ್ಲಿ, ತೆರಿಗೆ ನಿರ್ಧರಣೆ, ಸಂದಾಯ, ಸಂದಾಯಕ್ಕೆ ಒತ್ತಾಯಿಸುವುದು ಮತ್ತು ವಸೂಲಿ ನಿಯಮಿಸಬಹುದಾದಂತೆ ಇರತಕ್ಕದ್ದು.

7. **ರುಜುವಾತಿನ ಭಾರ.**- (1) ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ನಿರ್ಧರಣೆಯ ಉದ್ದೇಶಕ್ಕಾಗಿ, ಸ್ಥಳೀಯ ಪ್ರದೇಶದೊಳಗೆ ತಂದ ಅಥವಾ ತರುವಂತೆ ಮಾಡಿದ ಅಧಿಸೂಚಿತ ಸರಕುಗಳು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗುವುದಿಲ್ಲವೆಂದು ರುಜುವಾತುಪಡಿಸುವ ಹೊಣೆಯು ಅಂಥ ಆಮದುದಾರನ ಮೇಲೆ ಇರತಕ್ಕದ್ದು.

(2) ಒಬ್ಬ ಆಮದುದಾರನು, ತಾನು ಅಥವಾ ಇತರ ಯಾವೊಬ್ಬ ಆಮದುದಾರನು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗುವುದಿಲ್ಲವೆಂದು ಸಮರ್ಥಿಸುವ ಅಥವಾ ಯಾವುದೇ ಕ್ಲೇಮನ್ನು ಮಾಡುವ ದೃಷ್ಟಿಯಿಂದ, ತಾನು ಸುಳ್ಳೆಂದು ತಿಳಿದಿರುವ ಅಥವಾ ಸುಳ್ಳೆಂದು ನಂಬಲು ಕಾರಣವಿರುವ ಮಾರಾಟದ ಬಿಲ್, ವೋಚರ್, ಘೋಷಣೆ, ಪ್ರಮಾಣ ಪತ್ರ ಅಥವಾ ಯಾವುದೇ ಇತರ ದಸ್ತಾವೇಜನ್ನು ಒದಗಿಸಿದಲ್ಲಿ, ನೀಡಿದಲ್ಲಿ ಅಥವಾ ಕೊಟ್ಟಲ್ಲಿ, ತೆರಿಗೆ ನಿರ್ಧರಣಾ ಪ್ರಾಧಿಕಾರವು, ಹಾಗೆ ಒದಗಿಸಿರುವುದು ಅಥವಾ ನೀಡಿರುವುದು ಅಥವಾ ಕೊಟ್ಟಿರುವುದು, ಪತ್ತೆಯಾದ ತರುವಾಯ ಅಂಥ ಮಾರಾಟದ ಬಿಲ್, ವೋಚರ್, ಘೋಷಣೆ, ಪ್ರಮಾಣ ಪತ್ರ ಅಥವಾ ಇತರ ದಸ್ತಾವೇಜುಗಳನ್ನು ಒದಗಿಸಿದ, ನೀಡಿದ ಅಥವಾ ಕೊಟ್ಟ ಆಮದುದಾರನು, ದಂಡವಾಗಿ,-

(i) ಮೊದಲಸಲ ಅಪರಾಧ ಪತ್ತೆಯಾದ ಸಂದರ್ಭದಲ್ಲಿ, ಅಂಥ ಸರಕುಗಳ ಸಂಬಂಧದಲ್ಲಿ ವಿಧಿಸಿದ ಅಥವಾ ವಿಧಿಸತಕ್ಕ ತೆರಿಗೆಯ ಮೂರರಷ್ಟನ್ನು, ಮತ್ತು

(ii) ಎರಡನೆಯ ಬಾರಿ ಅಥವಾ ತರುವಾಯ ಅಪರಾಧ ಪತ್ತೆ ಮಾಡಲಾದ ಸಂದರ್ಭದಲ್ಲಿ ಅಂಥ ಸರಕುಗಳ ಸಂಬಂಧದಲ್ಲಿ ವಿಧಿಸಲಾದ ಅಥವಾ ವಿಧಿಸತಕ್ಕ ತೆರಿಗೆಯ ಐದರಷ್ಟನ್ನು,

- ಸಂದಾಯ ಮಾಡಬೇಕೆಂದು ನಿರ್ದೇಶಿಸತಕ್ಕದ್ದು:

ಪರಂತು, ಈ ಉಪಪ್ರಕರಣದ ಅಡಿಯಲ್ಲಿ ದಂಡದ ಸಂದಾಯಕ್ಕಾಗಿ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮೊದಲು ತೆರಿಗೆ ನಿರ್ಧರಣೆ ಪ್ರಾಧಿಕಾರವು, ಅಂಥ ದಂಡವನ್ನು ವಿಧಿಸುವುದರ ವಿರುದ್ಧ ಅಹವಾಲನ್ನು ಹೇಳಿಕೊಳ್ಳಲು ಆಮದುದಾರನಿಗೆ ಒಂದು ಅವಕಾಶವನ್ನು ಕೊಡತಕ್ಕದ್ದು.

**8. ಸದ್ಭಾವನೆಯ ಕ್ರಮಕ್ಕೆ ರಕ್ಷಣೆ.-** (1) ಈ ಅಧಿನಿಯಮದ ಅಡಿಯಲ್ಲಿ ಕೈಗೊಂಡ ಅಥವಾ ಕೈಗೊಳ್ಳಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕ್ರಮಕ್ಕಾಗಿ, ಸರ್ಕಾರದ ಯಾವೊಬ್ಬ ಅಧಿಕಾರಿಯ ಅಥವಾ ನೌಕರನ ವಿರುದ್ಧ, ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ ಮತ್ತು ಅಂಥ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ವ್ಯವಹರಣೆಯನ್ನು, ಯಾವ ಕ್ರಮದ ಬಗ್ಗೆ ದೂರು ನೀಡಲಾಗಿದೆಯೋ ಆ ಕ್ರಮಕೈಗೊಂಡ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾದ ತರುವಾಯ ಹೂಡತಕ್ಕದ್ದಲ್ಲ.

(2) ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನು, ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ, ಅವನಿಗೆ ವಿಧಿಸಿದ ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ವಹಿಸಿದ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಕೈಗೊಂಡ ಕ್ರಮವನ್ನು ಸದ್ಭಾವನೆಯಿಂದ ಕೈಗೊಂಡಿದ್ದರೆ, ಯಾವುದೇ ಅಂಥ ಕ್ರಮದ ಸಂಬಂಧದಲ್ಲಿ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗತಕ್ಕದ್ದಲ್ಲ.

**9. ಈ ಅಧಿನಿಯಮದಲ್ಲಿ ಉಪಬಂಧಿಸಲಾದುದರ ಹೊರತಾಗಿ ನ್ಯಾಯಾಲಯಗಳು ತೆರಿಗೆ ನಿರ್ಧರಣೆಯನ್ನು ತಳ್ಳಿಹಾಕತಕ್ಕದ್ದಲ್ಲ ಅಥವಾ ಮಾರ್ಪಾಡು ಮಾಡತಕ್ಕದ್ದಲ್ಲ.-** ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಲಾದುದರ ಹೊರತಾಗಿ, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ತೆರಿಗೆ ನಿರ್ಧರಣೆಯನ್ನು ತಳ್ಳಿಹಾಕುವುದಕ್ಕಾಗಿ ಅಥವಾ ಮಾರ್ಪಡಿಸುವುದಕ್ಕಾಗಿ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

## ಅಧ್ಯಾಯ - IV

## ಅಪರಾಧಗಳು ಹಾಗೂ ಜುಲ್ಮಾನೆಗಳು

**10. ಅಪರಾಧಗಳು ಹಾಗೂ ಜುಲ್ಮಾನೆಗಳು.-** (1) ಯಾವೊಬ್ಬ ವ್ಯಕ್ತಿಯು,-

(ಎ) ಈ ಅಧಿನಿಯಮದ ಅಡಿಯಲ್ಲಿ ನಿರ್ಧರಣೆ ಮಾಡಲಾದ ಯಾವುದೇ ತೆರಿಗೆ ಅಥವಾ ವಿಧಿಸಲಾದ ಯಾವುದೇ ಜುಲ್ಮಾನೆಯನ್ನು ಅನುಮತಿಸಲಾದ ಸಮಯದೊಳಗೆ ಸಂದಾಯ ಮಾಡದಿದ್ದರೆ, ಅಥವಾ

(ಬಿ) ಉದ್ದೇಶಪೂರ್ವಕವಾಗಿ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರಡಿ ಮಾಡಿದ ನಿಯಮಗಳಿಗೆ ವಿರುದ್ಧವಾಗಿ ವರ್ತಿಸಿದರೆ,

- ಅಪರಾಧ ನಿರ್ಣಯವಾದ ತರುವಾಯ, ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವೊಬ್ಬ ವ್ಯಕ್ತಿಯು,-

(ಎ) ಉದ್ದೇಶಪೂರ್ವಕವಾಗಿ ಸುಳ್ಳು ರಿಟರ್ನ್ ಸಲ್ಲಿಸಿದರೆ ಅಥವಾ ಈ ಅಧಿನಿಯಮದ ಮೂಲಕ ಅಥವಾ ಅದರಡಿ ಮಾಡಿದ ನಿಯಮಗಳ ಉಪಬಂಧಗಳ ಮೂಲಕ ಅಗತ್ಯಪಡಿಸಲಾದಂತೆ ರಿಟರ್ನ್ ಸಲ್ಲಿಸದಿದ್ದರೆ, ಅಥವಾ

(ಬಿ) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ ಅಥವಾ ಅವನು ಸಂದಾಯ ಮಾಡಬೇಕಾದ ಮೊತ್ತವನ್ನು ಸಂದಾಯ ಮಾಡುವುದನ್ನು ಮೋಸದಿಂದ ತಪ್ಪಿಸಿದರೆ,

- ಅವನು ಅಪರಾಧ ನಿರ್ಣಯವಾದ ತರುವಾಯ, ಅದು ಮೊದಲನೇ ಅಪರಾಧವಾಗಿದ್ದರೆ ಎರಡುಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡದಿಂದ ಮತ್ತು ಅದು

ಎರಡನೆಯ ಅಥವಾ ತರುವಾಯದ ಅಪರಾಧವಾಗಿದ್ದರೆ, ಆರುತಿಂಗಳ ವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(3) ಯಾವುದೇ ವಿವರಪಟ್ಟಿ ಅಥವಾ ಘೋಷಣೆಯನ್ನು ಮಾಡುವ ಯಾವೊಬ್ಬ ವ್ಯಕ್ತಿಯು, ತಾನು ಸುಳ್ಳೆಂದು ತಿಳಿದಿರುವ ಅಥವಾ ನಂಬಲು ಕಾರಣವಿರುವ ವಿವರಪಟ್ಟಿ ಅಥವಾ ಘೋಷಣೆಯನ್ನು ಯಾವುವೇ ದಾಖಲೆಗಳಲ್ಲಿ ಅಥವಾ ದಸ್ತಾವೇಜುಗಳಲ್ಲಿ ಮಾಡಿದ್ದರೆ ಅಪರಾಧ ನಿರ್ಣಯವಾದ ತರುವಾಯ ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗಲು ಬದ್ಧನಾಗಿರತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ, ಸಂದಾಯ ಮಾಡಬೇಕಾದ ಯಾವುದೇ ತೆರಿಗೆಯನ್ನು ಮೋಸದಿಂದ ತಪ್ಪಿಸುವಲ್ಲಿ ಅಥವಾ ತಪ್ಪಿಸುವ ಪ್ರಯತ್ನದಲ್ಲಿ ಅಥವಾ ತಪ್ಪಿಸುವುದಕ್ಕೆ ದುಷ್ಪ್ರೇರಿಸುವಲ್ಲಿ ತೊಡಗಿರುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ, ಆರು ತಿಂಗಳ ವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡಿತನಾಗತಕ್ಕದ್ದು.

**11. ಕಂಪೆನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧ ನಡೆದ ಕಾಲದಲ್ಲಿ ಅದರ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪೆನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಹಾಗೂ ಕಂಪನಿಯು ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವನು ತಮ್ಮ ವಿರುದ್ಧ ಕಾನೂನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿರುವುದು ಯಾವುದೂ, ಅಪರಾಧವು ತನ್ನ ತಿಳಿವಳಿಕೆಗೆ ಬರದೇ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಪ್ಪಿಸುವುದಕ್ಕಾಗಿ ಸೂಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಆತನು ರುಜುವಾತುಪಡಿಸಿದರೆ, ಅಂಥ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ಶಿಕ್ಷೆಗೆ ಗುರಿಯಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ ಒಂದು ಅಪರಾಧವನ್ನು ಕಂಪೆನಿಯು ಮಾಡಿದ್ದಲ್ಲಿ ಮತ್ತು ಅದು ಕಂಪೆನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ನಡೆಯಿತೆಂದು ರುಜುವಾತಾದರೆ, ಕಂಪೆನಿಯ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಬದ್ಧರಾಗಿರತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪೆನಿ" ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**12. ಅಪರಾಧಗಳ ಸಂಜ್ಞಾನ.-** (1) ಮಹಾನಗರ ಮ್ಯಾಜಿಸ್ಟ್ರೇಟರ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕಿಂತ ಕೆಳಗಿನ ದರ್ಜೆಯಾದ ನ್ಯಾಯಾಲಯವೂ ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆ ನಡೆಸತಕ್ಕದ್ದಲ್ಲ.

(2) ಯಾವುದೇ ನ್ಯಾಯಾಲಯವು, ಸರ್ಕಾರವು ಅಧಿಸೂಚಿಸಬಹುದಾದಂಥ ಪ್ರಾಧಿಕಾರದ ಲಿಖಿತ ದೂರಿನ ಮೇಲಲ್ಲದೆ, 11ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**13. ಅಪರಾಧಗಳ ರಾಜಿ.-** ನಿಯಮಿಸಲಾದ ಪ್ರಾಧಿಕಾರವು, 11ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಒಂದು ಅಪರಾಧವನ್ನು ಮಾಡಿರುವನೆಂದು ಅಥವಾ ಮಾಡಿದ್ದಾನೆಂದು ಯುಕ್ತವಾಗಿ ಶಂಕಿಸಲಾದ ಯಾವೊಬ್ಬ ವ್ಯಕ್ತಿಯಿಂದ ಅಂಥ ಅಪರಾಧದ ರಾಜಿಯ ರೂಪದಲ್ಲಿ, ಹತ್ತು ಸಾವಿರ ರೂಪಾಯಿಗಳಿಗೆ ಮೀರದ ಹಣದ ಮೊತ್ತ ಅಥವಾ ಸಂದಾಯ ಮಾಡಬೇಕಾದ ತೆರಿಗೆಯ ಮೊಬಲಗಿನ ಎರಡರಷ್ಟು ಇವುಗಳಲ್ಲಿ ಯಾವುದು ಹೆಚ್ಚಿನದೋ ಅದನ್ನು ಸ್ವೀಕರಿಸಬಹುದು.

## ಅಧ್ಯಾಯ - V

### ಸಂಕೀರ್ಣ

**14. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಸೂಕ್ತವೆಂದು ಕಂಡುಬರಬಹುದಾದಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಉಪಬಂಧಗಳನ್ನು ಆದೇಶದ ಮೂಲಕ ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

**15. ನಿಯಮಗಳನ್ನು ರಚಿಸಲು ಅಧಿಕಾರ.-** (1) ಸರ್ಕಾರವು, ಈ ಅಧಿನಿಯಮದ ಉದ್ದೇಶವನ್ನು ಈಡೇರಿಸುವುದಕ್ಕಾಗಿ, ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಬಹುದು.

(ಎ) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನೇಮಕ ಮಾಡಲಾದ ಅಧಿಕಾರಿಗಳ ಕರ್ತವ್ಯಗಳು ಮತ್ತು ಅಧಿಕಾರಗಳು;

(ಬಿ) ನಿಯಮಿಸಬೇಕೆಂದು ಈ ಅಧಿನಿಯಮದ ಮೂಲಕ ಸ್ಪಷ್ಟವಾಗಿ ಅಗತ್ಯಪಡಿಸಲಾದ ಅಥವಾ ಅನುಮತಿಸಲಾದ ಎಲ್ಲ ವಿಷಯಗಳು;

(ಸಿ) ಈ ಅಧಿನಿಯಮದ ಅಡಿಯಲ್ಲಿಯ ವ್ಯವಹರಣೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ ಹಾಗೂ ಅಂಗೀಕರಿಸಬೇಕಾದ ನಮೂನೆಗಳನ್ನು ಸಾಮಾನ್ಯವಾಗಿ ನಿಯಂತ್ರಿಸುವುದು;

(ಡಿ) ಶುಲ್ಕ ವಿಧಿಸುವಿಕೆಯೂ ಸೇರಿದಂತೆ ಮತ್ತು ಯಾವುದರ ಬಗ್ಗೆ ಈ ಅಧಿನಿಯಮದಲ್ಲಿ ಸ್ಪಷ್ಟ ಉಪಬಂಧ ಇಲ್ಲವೋ ಅದರ ಬಗ್ಗೆ, ಈ ಅಧಿನಿಯಮದ ಉದ್ದೇಶವನ್ನು ಜಾರಿಗೊಳಿಸುವುದಕ್ಕಾಗಿ ಸರ್ಕಾರವು ಅವಶ್ಯವೆಂದು ಅಭಿಪ್ರಾಯಪಡುವ ಯಾವುದೇ ಇತರ ವಿಷಯ; ಮತ್ತು

(ಇ) ಅಪೀಲನ್ನು ಅಥವಾ ಪರಿಷ್ಕರಣೆಯನ್ನು ವಿಲೇಮಾಡುವುದಕ್ಕೆ ಅನುಷಂಗಿಕವಾದ ಯಾವುದೇ ಇತರ ವಿಷಯಕ್ಕಾಗಿ ಕಾರ್ಯವಿಧಾನ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 5ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ಪ್ರಕಟಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನದ ಅಥವಾ ಅದರ ನಿಕಟೋತ್ತರದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಉಭಯ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಡಾದ ರೂಪದಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದಾಗ್ಯೂ ಅಂಥ ಮಾರ್ಪಾಡು ಅಥವಾ ರದ್ದತಿಯು, ಆ ನಿಯಮದ ಅಡಿಯಲ್ಲಿ ಅಥವಾ

ಅಧಿಸೂಚನೆ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆ ಉಂಟು ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ದಕ್ಷಿಣಾಮೂರ್ತಿ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಇಲಾಖೆ.